To :. Sannamma Somayaji

Shailaja Somayaji

ವಯಸ್ಕರ ಶಿಕ್ಷಣ ಮಾಲೆ - ೧೨೩

ಹತ್ತು ಸಣ್ಣ ಕಥೆಗಳು

[illegible]

ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.

ವಯಸ್ಕರ ಶಿಕ್ಷಣ ಸಮಿತಿ,
ಮೈಸೂರು

ಮೊದಲನೆಯ ಮುದ್ರಣ: ೧೯೫೯ ೬,೦೦೦ ಪ್ರತಿಗಳು
ಎರಡನೆಯ ಮುದ್ರಣ : ೧೯೬೯ ೩,೦೦೦ ಪ್ರತಿಗಳು

ಹಂತ ೨

ಮುದ್ರಕರು
ರಾಜ್ಯದ ವಯಸ್ಕರ ಶಿಕ್ಷಣ ಸಮಿತಿ ಮುದ್ರಣಾಲಯ,
ಮೈ ಸೂ ರು

೧. ಕ್ರೀಸೆಸ್ ಮತ್ತು ಸೋಲನ್



ಪೂರ್ವಕಾಲದಲ್ಲಿ ಎಂದರೆ ಕ್ರಿಸ್ತನು ಹುಟ್ಟುವುದಕ್ಕಿಂತ ಬಹಳ ಹಿಂದೆ ಲಿಡಿಯ ದೇಶವನ್ನು ಕ್ರೀಸೆಸ್ ಎಂಬ ಅರಸನು ಆಳುತ್ತಿದ್ದನು. ರಾಜನ ಬಳಿ ಅಪಾರವಾದ ಐಶ್ವರ್ಯವಿತ್ತು; ಚಿನ್ನವಿತ್ತು; ಬೆಳ್ಳಿಯಿತ್ತು; ಬೆಲೆ ಬಾಳುವ ರತ್ನಗಳಿದ್ದುವು. ಎಲ್ಲಕ್ಕೂ ಮಿಗಿಲಾಗಿ ಅವನ ಬಳಿ ಲೆಕ್ಕವಿಲ್ಲದಷ್ಟು ಯೋಧರೂ, ದಾಸರೂ ಇದ್ದರು. ಆದ ಕಾರಣ ತನಗಿಂತಲೂ ಸುಖಿಯಾದ ಮನುಷ್ಯನು ಮತ್ತೊಬ್ಬನು ಇಲ್ಲವೆಂದು ಅವನು ತಿಳಿದುಕೊಂಡಿದ್ದನು.

ಹೀಗಿರಲು ಒಮ್ಮೆ ಕ್ರೀಸೆಸ್ ದೊರೆ ಆಳುತ್ತಿದ್ದ ದೇಶವನ್ನು ನೋಡಲು ಸೋಲನ್ ಎಂಬ ಗ್ರೀಸ್ ದೇಶದ ತತ್ವಜ್ಞಾನಿ ಅಲ್ಲಿಗೆ ಬಂದನು. ಈತನು ವಿವೇಕಿಯೂ, ನ್ಯಾಯನಿಷ್ಠನೂ ಆದ ಮನುಷ್ಯನೆಂಬ ಕೀರ್ತಿ ಈ ವೇಳೆಗೆ ಎಲ್ಲೆಡೆಯಲ್ಲಿಯೂ ಹರಡಿ, ಕ್ರೀಸೆಸ್ಸಿನ

ಕಿವಿಯವರೆಗೂ ಮುಟ್ಟಿತ್ತು. ಆದ್ದರಿಂದ ಸೋಲನ್ ರಾಜಧಾನಿಯಾದ ಸಾರ್ಡಿಸ್ ನಗರದಲ್ಲಿ ಕಾಲಿಡುತ್ತಲೇ ಅರಸನು ಅವನನ್ನು ತನ್ನ ಸನ್ಮುಖಕ್ಕೆ ಕರೆತರುವಂತೆ ಅಪ್ಪಣೆ ಮಾಡಿದನು.

ರಾಜವೈಭವಕ್ಕೆ ಒಪ್ಪುವ ರತ್ನಖಚಿತವಾದ ಉಡುಪನ್ನು ಧರಿಸಿ, ಸಿಂಹಾಸನದ ಮೇಲೆ ಕುಳಿತು, ದೊರೆ 'ಇದನ್ನು ಮೀರಿಸುವಂತಹ ವೈಭವವನ್ನು ನೀನು ನೋಡಿರುವೆಯಾ?' ಎಂದು ಅವನನ್ನು ಕೇಳಿದನು.

ಉತ್ತರವಾಗಿ ಸೋಲನ್ ಹೀಗೆ ನುಡಿದನು: 'ಖಂಡಿತವಾಗಿಯೂ ನೋಡಿದ್ದೇನೆ. ನವಿಲು, ಹುಂಜ ಇವೂ ಬಗೆ ಬಗೆಯ ಬಣ್ಣಗಳಿಂದ ಬೆಳಗುತ್ತವೆ. ಯಾವ ಕಲೆಯೂ ಅವುಗಳಿಗೆ ಸರಿಗಟ್ಟಲಾರದಷ್ಟೆ!'

ಈ ಮಾತನ್ನು ಕೇಳಿ ಕ್ರೀಸೆಸ್ ಮೌನವಾಗಿ ತನ್ನಲ್ಲಿಯೇ ಯೋಚಿಸಿದನು—'ಈಗ ನಾನು ಇವನಿಗೆ ತೋರಿಸಿದ ವೈಭವ ಸಾಲದು; ಇದಕ್ಕಿಂತಲೂ ಹೆಚ್ಚಿನದನ್ನು ತೋರಿ ಇವನನ್ನು ಬೆರಗುಗೊಳಿಸಬೇಕು.'

ಹೀಗೆಂದು ಯೋಚಿಸಿ, ಕ್ರೀಸೆಸ್ ತನ್ನ ಸಮಸ್ತ ಸಂಪತ್ತನ್ನೂ ಸೋಲನ್ನನ ಮುಂದೆ ಮೆರೆಯಿಸಿ, ತಾನು ಸಂಹರಿಸಿದ ಶತ್ರು ಸಂಖ್ಯೆಯನ್ನೂ, ಗೆದ್ದ ದೇಶಗಳನ್ನೂ ಆತನಿಗೆ ವಿವರಿಸಿ ಅವನ ಮುಂದೆ ತನ್ನ ಪ್ರತಾಪವನ್ನು ಕೊಚ್ಚಿಕೊಂಡನು.

ಅನಂತರ ಆ ತತ್ವಜ್ಞಾನಿಗೆ ದೊರೆ 'ಈ ಪ್ರಪಂಚದಲ್ಲಿ ಇಷ್ಟು ಕಾಲ ಬಾಳಿ ಬದುಕಿರುವೆ. ಅನೇಕ ನಾಡುಗಳನ್ನು ಸುತ್ತಿರುವೆ. ಈಗ ಪ್ರಪಂಚದಲ್ಲಿ ನೀನು ಯಾರನ್ನು ಅತ್ಯಂತ ಸುಖಿಯೆಂದು ಬಗೆದಿರುವೆ, ಹೇಳು?' ಎಂದನು.

'ಅಥೆನ್ಸ್ ನಗರದಲ್ಲಿ ಜೀವಿಸುತ್ತಿರುವ ಯಾವನೋ ಒಬ್ಬ

ಹೆಸರಿಲ್ಲದ ಬಡ ಮನುಷ್ಯನೊಬ್ಬನು ಅತ್ಯಂತ ಸುಖಿಯೆಂದು ನಾನು ಬಗೆಯುತ್ತೇನೆ' ಎಂದು ಸೋಲನ್ ಉತ್ತರಕೊಟ್ಟನು.

ತನ್ನನ್ನೇ ಹೆಸರಿಸುವನೆಂದು ಖಂಡಿತವಾಗಿಯೂ ನಂಬಿದ್ದ ಅರಸನಿಗೆ ಸೋಲನ್ನನ ಉತ್ತರದಿಂದ ಆಶ್ಚರ್ಯವಾಯಿತು. ತನಗೆ ಬದಲಾಗಿ ಆ ತತ್ವಜ್ಞಾನಿ ಯಾವನೋ ಒಬ್ಬ ಭಿಕಾರಿಯ ಹೆಸರನ್ನು ಹೇಳಬೇಕೆ?

'ಹಾಗೇಕೆ ಹೇಳುವೆ?' ಎಂದು ಕ್ರೀಸೆಸ್ ಹೇಳಿದನು. ಆ ಮಾತಿಗೆ ಸೋಲನ್ ಹೇಳಿದನು. 'ಏಕೆಂದರೆ ನಾನು ಹೇಳಿದ ಮನುಷ್ಯ ಬಾಳಿನಲ್ಲೆಲ್ಲಾ ಕಷ್ಟಪಟ್ಟು ದುಡಿದಿದ್ದಾನೆ. ಮೇಲಾಗಿ ಅವನು ಅಲ್ಪ ತೃಪ್ತ. ತನ್ನ ಮಕ್ಕಳನ್ನು ಚೆನ್ನಾಗಿ ಸಾಕಿ ಬೆಳಸಿದ್ದಾನೆ. ತಾನು ವಾಸಮಾಡುತ್ತಿರುವ ನಗರಕ್ಕೆ ತನ್ನ ಕೈಲಾದ ಸೇವೆಯನ್ನು ಸಲ್ಲಿಸಿದ್ದಾನೆ. ಅಲ್ಲದೆ ಅಲ್ಪ ಸ್ವಲ್ಪ ಕೀರ್ತಿಯನ್ನೂಗಳಿಸಿದ್ದಾನೆ.'

ಕ್ರೀಸೆಸ್ ಈ ಮಾತುಗಳನ್ನು ಕೇಳಿ ಆಶ್ಚರ್ಯಚಕಿತನಾಗಿ ನುಡಿದನು:

'ನನ್ನ ಐಶ್ವರ್ಯ, ಸೌಖ್ಯ ಇವುಗಳನ್ನು ಹುಲ್ಲಿಗಿಂತಲೂ ಕಡೆಯೆಂದು ಎಣಿಸಿ, ನೀನು ಹೆಸರಿಸುತ್ತಿರುವ ಆ ಬಡವನೊಡನೆ ಹೋಲಿಸುವುದಕ್ಕೂ ನಾನು ಅನರ್ಹನೆಂದು ನೀನು ತಿಳಿದಿರುವೆಯೇನು?'

ಅದಕ್ಕೆ ಸೋಲನ್ ಉತ್ತರಕೊಟ್ಟನು: 'ಅನೇಕ ವೇಳೆ ಐಶ್ವರ್ಯವಂತನಿಗಿಂತ ಬಡವನು ಎಷ್ಟು ಸುಖಿ. ಸಾಯುವವರೆಗೆ ಯಾವ ಮನುಷ್ಯನನ್ನೂ ಸುಖಿಯೆಂದು ಎಣಿಸಬೇಡ.'

ತತ್ವಜ್ಞಾನಿಯು ಈ ಮಾತುಗಳಲ್ಲಿ ನಂಬಿಕೆ ಬಾರದುದರಿಂದ ಅವನ ಮಾತುಗಳು ರಾಜನನ್ನು ಹರ್ಷಗೊಳಿಸದಾದುದರಿಂದ ಅರಸನು ಸೋಲನ್ನನನ್ನು ಬೀಳ್ಕೊಟ್ಟನು.

'ಬದುಕಿದರೆ ಸುಖಪಡುವುದಕ್ಕಾಗಿಯೇ ಬದುಕಬೇಕು' ಎಂದು ಅರಸನು ಯೋಚಿಸಿದನು.

ಕಾಲಕ್ರಮದಲ್ಲಿ ಸೋಲನ್ ಕ್ರೀಸೆಸ್‌ನ ಮನಸ್ಸಿನಿಂದ ಸಂಪೂರ್ಣವಾಗಿ ಮಾಯವಾದನು.

ಈ ಪ್ರಸಂಗ ನಡೆದು ಬಹುಕಾಲವಾಗಿರಲಿಲ್ಲ. ಒಮ್ಮೆ ದೊರೆಯ ಮಗನು ಬೇಟೆಗಾಗಿ ಹೋಗಿದ್ದನು. ಆದರೆ ದುರದೃಷ್ಟ ವಶದಿಂದ ಬೇಟೆಯಾಡುವಾಗ ಗಾಯವಾಗಿ, ಆ ಗಾಯದಿಂದಲೇ ಅವನು ತೀರಿಕೊಂಡನು. ದೊರೆಗೆ ಈ ಸಂಕಟ ಇನ್ನೂ ಆರಿರಲಿಲ್ಲ. ಅಷ್ಟರಲ್ಲೇ ಚಕ್ರವರ್ತಿ ಕೈರಸ್ ಕ್ರೀಸೆಸ್‌ನ ಮೇಲೆ ಯುದ್ಧ ಮಾಡಲು ಬರುತ್ತಿರುವ ಸಮಾಚಾರ ಅರಸನಿಗೆ ತಿಳಿಯಬಂತು.

ಕೈರಸ್ಸನನ್ನು ಎದುರಿಸಲು ಕ್ರೀಸೆಸ್ ತನ್ನ ದೊಡ್ಡ ಸೈನ್ಯ ದೊಡನೆ ಹೊರಟನು. ಆದರೆ ಕದನದಲ್ಲಿ ಹಗೆಯ ಕೈಮೇಲಾಯಿತು. ಕೈರಸ್ ಕದನದಲ್ಲಿ ಗೆದ್ದು, ಕ್ರೀಸೆಸ್ಸಿನ ಸೈನ್ಯವನ್ನು ಚದುರಿಸಿ ರಾಜಧಾನಿಯೊಳಕ್ಕೆ ನುಗ್ಗಿದನು.

ಶತ್ರು ಸೈನಿಕರು ಅರಸನ ಐಶ್ವರ್ಯವನ್ನು ಲೂಟಿಮಾಡಿ, ನಗರದ ಪ್ರಜೆಗಳನ್ನು ಕೊಂದು ರಾಜಧಾನಿಯನ್ನು ನೆಲಸಮ ಮಾಡಲು ಮೊದಲು ಮಾಡಿದರು. ಒಬ್ಬ ಸೈನಿಕನು ಕ್ರೀಸೆಸ್ಸನನ್ನೇ ಸೆರೆಹಿಡಿದು ಕೊಲ್ಲುವುದರಲ್ಲಿದ್ದನು. ಅಷ್ಟರಲ್ಲೆ ಅರಸನ ಇನ್ನೊಬ್ಬ ಮಗ ತಂದೆಯನ್ನು ಕಾಪಾಡಲು ಮುನ್ನುಗ್ಗಿ ಬಲವಾಗಿ ಕೂಗಿ ಕೊಂಡನು.

'ಅವನನ್ನು ಮುಟ್ಟಬೇಡ! ಆತನೇ ಕ್ರೀಸೆಸ್ ದೊರೆ!'

ಇದನ್ನು ಕೇಳಿ ಸೈನಿಕರು ಕ್ರೀಸೆಸ್ಸನನ್ನು ಬಂಧಿಸಿ, ಚಕ್ರ ವರ್ತಿಯ ಬಳಿ ಕರೆದುಕೊಂಡು ಹೋದರು. ಆದರೆ ಕೈರಸ್ ತನಗಾದ ವಿಜಯಕ್ಕಾಗಿ ರಾಜಭೋಜನವನ್ನು ಏರ್ಪಡಿಸಿದ್ದ ಕಾರಣ

ಬಂದಿಯೊಡನೆ ಮಾತನಾಡಲಿಲ್ಲ. ಕ್ರೀಸೆಸ್ಸನನ್ನು ಶೂಲಕ್ಕೆ ಏರಿಸುವಂತೆ ಮಾತ್ರ ಅಪ್ಪಣೆಯಾಯಿತು.

ರಾಜಧಾನಿಯ ನಡುವಣ ಚೌಕದಲ್ಲಿ ಸೈನಿಕರು ದೊಡ್ಡದೊಂದು ಕಟ್ಟಿಗೆಯ ಗುಡ್ಡೆಯನ್ನು ನಿರ್ಮಿಸಿದರು. ಅದರ ಮೇಲೆ ಒಂದು ಗೂಟಕ್ಕೆ ಕ್ರೀಸೆಸ್ ದೊರೆಯನ್ನು ಬಿಗಿದು ಕಟ್ಟಿ ಕೆಳಗೆ ಬೆಂಕಿಯಿಟ್ಟರು.

ಗುಡ್ಡೆಯ ಮೇಲಿನಿಂದಲೇ ತನ್ನ ನಗರವನ್ನೂ ಅರಮನೆಯನ್ನೂ ಕ್ರೀಸೆಸ್ ದೃಷ್ಟಿಸಿ ನೋಡಿದನು. ಆ ಸಮಯದಲ್ಲಿ ಸೋಲನ್ನನ ಮಾತುಗಳು ನೆನಪಿಗೆ ಬಂದುವು. ತಕ್ಷಣವೇ ದೊರೆ ಕಣ್ಣು ತುಂಬ ನೀರು ತುಂಬಿ ನೊಂದ ಧ್ವನಿಯಲ್ಲಿ ಈ ರೀತಿ ನುಡಿದನು: 'ಹಾ ಸೋಲನ್, ಸೋಲನ್!' ಆ ವೇಳೆಗೆ ಸೈನಿಕರು ಗುಡ್ಡೆಯ ಸುತ್ತಲೂ ನೆರೆಯುವುದರಲ್ಲಿದ್ದರು. ಆಗ ಚಕ್ರವರ್ತಿ ಕೈರಸ್ ಈ ನೋಟವನ್ನು ನೋಡಲು ತಾನೂ ಅಲ್ಲಿಗೆ ಬಂದನು. ಹಾಗೆ ಬರುತ್ತಿದ್ದಾಗ ಕ್ರೀಸೆಸ್ ನುಡಿದ ಮಾತುಗಳು ಅವನ ಕಿವಿಗೆ ಬಿದ್ದುವು. ಆದರೆ ಅರ್ಥವಾಗಲಿಲ್ಲ.

ತಕ್ಷಣವೇ ಕ್ರೀಸೆಸ್ಸನನ್ನು ಗುಡ್ಡೆಯಿಂದ ಕೆಳಗಿಳಿಸಬೇಕೆಂದು ಚಕ್ರವರ್ತಿ ಅಪ್ಪಣೆಮಾಡಿ, ಆಗತಾನೇ ಅವನು ನುಡಿದುದೇನೆಂದು ವಿಚಾರಿಸಿದನು. ಕ್ರೀಸೆಸ್ ಅದಕ್ಕೆ ಈ ರೀತಿ ಉತ್ತರಕೊಟ್ಟನು.

'ನಮ್ಮ ರಾಜವೈಭವ, ಐಶ್ವರ್ಯಗಳಿಗಿಂತಲೂ ಮೀರಿದ ಸತ್ಯವೊಂದನ್ನು ಒಮ್ಮೆ ನನಗೆ ನುಡಿದ ಒಬ್ಬ ಜ್ಞಾನಿಯ ಹೆಸರನ್ನು ನೆನೆದುಕೊಂಡೆ.'

ಅನಂತರ ಕ್ರೀಸೆಸ್ ತನಗೂ ಸೋಲನ್ನನಿಗೂ ನಡೆದ ಮಾತುಕತೆಗಳನ್ನು ಚಕ್ರವರ್ತಿಗೆ ಹೇಳಿದನು. ಈ ಕತೆ ಚಕ್ರವರ್ತಿಯ ಹೃದಯದಲ್ಲಿ ಗಾಢವಾಗಿ ನಾಟಿತು. ಎಷ್ಟಾದರೂ ತಾನೂ ಇತರ

ರಂತೆ ಒಬ್ಬ ಮನುಷ್ಯ, ತನಗಾಗಿ ಯಾವ ಅದೃಷ್ಟ ಕಾದಿದೆಯೋ ಎಂದು ಯೋಚಿಸಿದನು. ಈ ಪ್ರಸಂಗ ನಡೆದ ಮೇಲೆ ಚಕ್ರವರ್ತಿ ಕ್ರೀಸೆಸ್‌ನ ಮೇಲೆ ದಯೆತೋರಿ ಅವನ ಗೆಳೆಯನಾದನು.

೨. ಜಿಪುಣನ ಹೊನ್ನು

ಹೊನ್ನೂರಿನಲ್ಲಿ ಒಬ್ಬ ಜಿಪುಣನಿದ್ದನು. ಚಿನ್ನ ಎಂದರೆ ಅವನಿಗೆ ಪಂಚಪ್ರಾಣ. ಹೀಗಿರಲು ಒಮ್ಮೆ ಅವನು ತನ್ನ ಎಲ್ಲ ಆಸ್ತಿಯನ್ನೂ ಮಾರಿ ಬಂದ ಹಣಕ್ಕೆ ಚಿನ್ನವನ್ನು ಕೊಂಡುಕೊಂಡನು. ಆ ಹೊನ್ನನ್ನೆಲ್ಲ ಕರಗಿಸಿ, ಅದನ್ನು ಒಂದು ಗಟ್ಟಿಯನ್ನಾಗಿ ಮಾಡಿದನು. ತನ್ನ ತೋಟದಲ್ಲಿ ಯಾರಿಗೂ ಕಾಣಿಸದ ಸ್ಥಳದಲ್ಲಿ ಒಂದು ಗುಂಡಿಯನ್ನು ತೆಗೆದು, ಅಲ್ಲಿ ಅದನ್ನು ಹೂತಿಟ್ಟನು. ರಾತ್ರಿಯೆನ್ನದೆ ಹಗಲೆನ್ನದೆ ಆ ಸ್ಥಳಕ್ಕೆ ಹೋಗಿ 'ಕಣ್ಣಿನಲ್ಲಿ ನೋಡು, ಮಣ್ಣಿನಲ್ಲಿ ಮುಚ್ಚು' ಎಂಬ ಗಾದೆಯಂತೆ, ಅದನ್ನು ನೋಡಿ ಸಂತೋಷಪಡುವುದೇ ಅವನ ನಿತ್ಯದ ಕೆಲಸವಾಗಿತ್ತು.

ಹೀಗೆಯೇ ಕೆಲವು ದಿನ ಕಳೆಯಿತು. ಒಂದು ದಿನ ರಾತ್ರಿ ಕಳ್ಳನೊಬ್ಬನು ಇದರ ಸುಳಿವನ್ನು ಕಂಡುಕೊಂಡನು. ಈ ನಡುವೆ ಜಿಪುಣನು ಅಲ್ಲಿಗೆ ಬಂದು ತನ್ನ ಹೊನ್ನನ್ನು ನೋಡಿ ಸಂತೋಷಪಟ್ಟುಕೊಂಡು ಮನೆಗೆ ಹೋದನು. ಆ ಮೇಲೆ ಕಳ್ಳನು ಗುಂಡಿಯನ್ನು ಅಗೆದು ಆ ಚಿನ್ನದ ಗಟ್ಟಿಯನ್ನು ಕದ್ದು ನಡೆದನು.

ಮಾರನೆಯ ದಿನ ಜಿಪುಣನು ಅಲ್ಲಿಗೆ ಬಂದು ಗುಂಡಿಯನ್ನು ಅಗೆದು ನೋಡಿದಾಗ ಅಲ್ಲಿ ಹೊನ್ನು ಇರಲಿಲ್ಲ. ಅವನಿಗೆ ಎಚ್ಚರ ತಪ್ಪಿತು. ಎಚ್ಚರ ತಿಳಿದ ಮೇಲೆ ಅವನು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದನು. ಇದನ್ನು ತಿಳಿದ ಪಕ್ಕದ ಮನೆಯವನು 'ಅಯ್ಯಾ,

ಇಷ್ಟೇಕೆ ನೀನು ಬಿಕ್ಕಿ ಬಿಕ್ಕಿ ಅಳುತ್ತೀಯೆ? ಚಿನ್ನದ ಗಟ್ಟಿಯ ಬದಲು ಒಂದು ಕಲ್ಲನ್ನು ಅದೇ ಗುಂಡಿಯಲ್ಲಿ ಇಡು. ಏಕೆಂದರೆ



ಆ ಚಿನ್ನದಿಂದ ನಿನಗೆ ಉಪಯೋಗವಿಲ್ಲದಿರುವಾಗ ನಿನ್ನ ಪಾಲಿಗೆ ಚಿನ್ನವೂ ಒಂದೇ ಕಲ್ಲೂ ಒಂದೇ.' ಎಂದನು.

ಈ ಮಾತನ್ನು ಕೇಳಿ ಜಿಪುಣನು ನಾಚಿ ತಲೆ ತಗ್ಗಿಸಿದನು.

ಉಣ್ಣದೊಡವೆಯು ಗಳಿಸಿ ಮಣ್ಣೊಳಗೆ ಹೂತಿಟ್ಟು
ಸಣ್ಣಾಗಿ ನೆಲನ ಸಾರಿಸಿದನ ಬಾಯೊಳಗೆ
ಮಣ್ಣು ಕಾಣಯ್ಯ ಸರ್ವಜ್ಞ.

೩. ಹಾದಿಹೋಕರು ಮತ್ತು ಕರಡಿ

ಇಬ್ಬರು ಗೆಳೆಯರು ತಮ್ಮ ಪಕ್ಕದ ಊರಿಗೆ ಹೋಗುತ್ತಿದ್ದರು. ಇದ್ದಕ್ಕಿದ್ದಂತೆಯೇ ಎದುರಿಗೆ ಕರಡಿಯೊಂದು ಬರುತ್ತಿರುವುದು ಅವರ ಕಣ್ಣಿಗೆ ಬಿತ್ತು.

ಕರಡಿಯನ್ನು ಕಂಡು ಆ ಗೆಳೆಯರಲ್ಲಿ ಒಬ್ಬನು ಬಲು ಹೆದರಿ ತನ್ನ ಇನ್ನೊಬ್ಬ ಗೆಳೆಯನ ಕ್ಷೇಮವನ್ನೂ ಕೂಡ ಯೋಚಿಸದೆ ಮರ ವನ್ನೇರಿ ಬಿಟ್ಟನು.

ಇನ್ನೊಬ್ಬನು ಕರಡಿಯನ್ನು ಒಂಟಿಯಾಗಿ ಇದಿರಿಸಬೇಕಾ ಯಿತು. ಭಯಂಕರವಾದ ಕರಡಿಯೆಲ್ಲಿ? ಆ ಮನುಷ್ಯನೆಲ್ಲಿ?

ಆಗ ಅವನಿಗೆ ಕೂಡಲೆ ಒಂದು ಉಪಾಯ ಹೊಳೆಯಿತು. ಸತ್ತವರ ತಂಟೆಗೆ ಕರಡಿ ಬಾರದೆಂದು ಅವನು ಎಂದೋ ಕೇಳಿದ್ದನು. ಆ ಕೇಳಿಕೆಯ ಮೇಲೆ ಅವನು ಸತ್ತವನಂತೆ ನೆಲದ ಮೇಲೆ ಅಂಗಾತ ಮಲಗಿಬಿಟ್ಟನು.

ಕರಡಿ ಮಲಗಿದವನ ಹತ್ತಿರ ಬಂದು ಅವನ ಮೂಗು ಕಿವಿ ಗಳನ್ನು ಮೂಸಿತು. ಮಲಗಿದವನೂ ಬಹಳ ಧೈರ್ಯವಾಡಿ ಬಹಳ ಹೊತ್ತು ಉಸಿರು ಹಿಡಿದನು. ಕೊನೆಗೆ ಅವನು ಸತ್ತಿರುವನೆಂದೇ ತಿಳಿದು ಕರಡಿ ನಿಧಾನವಾಗಿ ಹೊರಟುಹೋಯಿತು. ಸತ್ತವರನ್ನು ಕರಡಿ ತೊಂದರೆಮಾಡುವುದಿಲ್ಲವಂತೆ!

ಕರಡಿ ಕಣ್ಣಿಗೆ ಮರೆಯಾಯಿತು. ಆಗ ಮರದ ಮೇಲಿದ್ದ ವನು ಕೆಳಗೆ ಇಳಿದು ಬಂದನು. ತನ್ನ ಗೆಳೆಯನನ್ನು ಕುರಿತು 'ಏನಯ್ಯಾ, ಕರಡಿ ನಿನ್ನೊಡನೆ ಏನೋ ಗುಟ್ಟಾಗಿ ಮಾತನಾಡು ವಂತೆ ಇತ್ತು' ಎಂದನು.

"ಅದೇನೂ ಅಂತಹ ಗುಟ್ಟಲ್ಲ. 'ಕಷ್ಟದಲ್ಲಿ ಕೈಬಿಡುವ



ಗೆಳೆಯನನ್ನು ನೆಚ್ಚಬೇಡ' ಎಂದು ಬುದ್ಧಿ ಹೇಳಿತು ; ಅಷ್ಟೆ.'' ಎಂದು ಇನ್ನೊಬ್ಬನು ಉತ್ತರಕೊಟ್ಟನು.

ಇದನ್ನು ಕೇಳಿದ ಮೊದಲನೆ ಗೆಳೆಯನ ಮುಖ ಬೆವರಿ ಬೆಪ್ಪಾಯಿತು.

ಆಪತ್ತಿಗಾದವನೇ ನಂಟ ; ಸಮಯಕ್ಕಾದವನೇ ಬಂಟ.

೪. ರೈತ ಮತ್ತು ಕೋಗಿಲೆ

ಬಹಳ ಕಾಲದ ಹಿಂದೆ ಮಲ್ಲಿಗೆಹಳ್ಳಿಯಲ್ಲಿ ಒಬ್ಬ ರೈತನಿದ್ದನು. ಒಂದು ದಿನ ರಾತ್ರಿ ಅವನು ತನ್ನ ಮನೆಯ ಕೈಸಾಲೆಯಲ್ಲಿ ಮಲಗಿದ್ದನು. ಹೊರಗಡೆ ಹಾಲು ಚೆಲ್ಲಿದಂತೆ ಬೆಳದಿಂಗಳು ಹರಡಿತ್ತು. ಆ ಸಮಯದಲ್ಲಿ ಕೋಗಿಲೆಯೊಂದು ಎಲ್ಲಿಂದಲೋ ಹಾರಿ ಬಂದು ಅವನ ಮನೆಯ ಮೇಲೆ ಕುಳಿತು ರಾತ್ರಿಯೆಲ್ಲಾ ಹಾಡಿತು. ಇದನ್ನು ಕೇಳಿ ರೈತನಿಗೆ ತುಂಬ ಸಂತೋಷವಾಯಿತು. ಮಾರನೆಯ ದಿನ ಬಲೆಯೊಡ್ಡಿ ರೈತನು ಆ ಹಕ್ಕಿಯನ್ನು ಹಿಡಿದನು. 'ಈಗ ನೀನು ನನ್ನ ಆಸ್ತಿ. ನನಗಾಗಿ ನೀನು ಯಾವಾಗಲೂ ಹಾಡುತ್ತಿರಬೇಕು'. ಎಂದು ಅವನು ಹಕ್ಕಿಗೆ ನುಡಿದನು.

'ನನ್ನನ್ನು ಸೆರೆಯಿಟ್ಟಾಗ ಹಾಡಲು ಸಾಧ್ಯವಿಲ್ಲ' ಎಂದು ಕೋಗಿಲೆ ರೈತನಿಗೆ ನುಡಿಯಿತು.

'ಹಾಗಾದರೆ ನಿನ್ನನ್ನು ಕೊಂದು ತಿನ್ನುತ್ತೇನೆ. ನಿನ್ನ ಮಾಂಸ ಬಲು ರುಚಿ.'

'ಬೇಡ, ನನ್ನನ್ನು ಕೊಲ್ಲಬೇಡ. ನನ್ನನ್ನು ಬಿಟ್ಟು ಬಿಡು. ನನ್ನ ಮಾಂಸಕ್ಕಿಂತಲೂ ಬೆಲೆಯಾದ ಮೂರು ವಿಷಯಗಳನ್ನು ನಿನಗೆ ತಿಳಿಸುತ್ತೇನೆ.'

ರೈತನು ಅದನ್ನು ಬಿಟ್ಟುಬಿಡಲು ಕೋಗಿಲೆ ಮರದಮೇಲೆ ಹೋಗಿ ಕುಳಿತು, 'ಬಂಧನಗಳಲ್ಲಿರುವವರ ಆಣೆ ಪ್ರಮಾಣಗಳನ್ನು ನಂಬಬೇಡ. ಇದು ನಾನು ಹೇಳಬೇಕೆಂದಿರುವ ಮೊದಲ ಮಾತು. ಎರಡನೆಯದಾಗಿ ನಿನ್ನಲ್ಲಿರುವುದನ್ನು ಭದ್ರಪಡಿಸಿಕೋ. ಮೂರನೆ



ಯದಾಗಿ ಕೈ ಬಿಟ್ಟದ್ದು ಕೃಷ್ಣಾರ್ಪಣ ಎಂದು ತಿಳಿದುಕೋ. ಅದ ಕ್ಕಾಗಿ ದುಃಖಿಸಬೇಡ.' ಎಂದು ಹೇಳಿ ಹಾರಿಹೋಯಿತು.

ಕೈಬಿಟ್ಟದ್ದು ಕೃಷ್ಣಾರ್ಪಣ

೫. ಸಿಂಹದ ಪಾಲು

ಒಂದು ಸಿಂಹ ಕಾಡಿನಲ್ಲಿ ತನ್ನ ಸ್ನೇಹಿತರಾದ ನರಿ, ತೋಳ ಇವುಗಳೊಂದಿಗೆ ಬೇಟೆಯಾಡುತ್ತಿತ್ತು. ಅವು ಬಹಳ ಹೊತ್ತು ಬೇಟೆಯಾಡಿ ಕೊನೆಗೆ ಜಿಂಕೆಯೊಂದನ್ನು ಎದುರಿಸಿ ಕೊಂದವು.

ಜಿಂಕೆಯನ್ನು ಮೂವರೂ ಸೇರಿ ಬೇಟೆಯಾಡಿದ್ದರು. ಆಗ ಬೇಟೆಯ ಹಂಚಿಕೆಯ ಪ್ರಶ್ನೆ ಅವರಿದುರಿಗೆ ಬಂದು ನಿಂತಿತು. ಸಿಂಹ ಜಿಂಕೆಯನ್ನು ನಾಲ್ಕು ಸಮ ಪಾಲು ಮಾಡಿ ಎಂದಿತು. ಉಳಿದುವು ಮೃಗರಾಜನ ಮಾತಿನಂತೆ ಜಿಂಕೆಯ ಚರ್ಮವನ್ನು ಸುಲಿದು ಅದರ ಮಾಂಸವನ್ನು ನಾಲ್ಕು ಪಾಲು ಮಾಡಿದುವು.



ಆ ಬಳಿಕ ಸಿಂಹವು ಮಾಂಸದ ಮುಂದೆ ನಿಂತು ತನ್ನ ತೀರ್ಪನ್ನು ಕೊಟ್ಟಿತು. ‘ ಮೃಗರಾಜನಾದ್ದರಿಂದ ನನಗೆ ಮೊದಲ ಪಾಲು. ನಾನು ಕೊಟ್ಟ ತೀರ್ಪಿಗಾಗಿ ಎರಡನೆಯ ಪಾಲು, ಬೇಟೆಯಲ್ಲಿ ಭಾಗವಹಿಸಿದ್ದಕ್ಕಾಗಿ ಮತ್ತೊಂದು ಪಾಲು. ಇನ್ನುಳಿದಿರುವ ಕೊನೆಯ ಪಾಲನ್ನು ಮುಟ್ಟಲು ಯಾರಿಗೆ ಎದೆ ಇದೆಯೋ ಅವರು ಮುಂದೆ ಬನ್ನಿ’ ಎಂದಿತು. ಮೃಗರಾಜನ ಗರ್ಜನೆಯನ್ನು ಕೇಳಿ ನರಿಯು ಮುಖ ಸಪ್ಪೆಯಾಯಿತು. ಆ ಸ್ಥಳವನ್ನು ಬಿಟ್ಟು ಹೋಗುತ್ತಾ ಅದು ಮೆಲ್ಲನೆ ಈ ರೀತಿ ಹೇಳಿತು :

‘ ಬಡವನ ಕಷ್ಟ, ಸಿರಿವಂತನ ಸುಖ ’

೬. ಕತ್ತೆಯ ಮೆದುಳು

ಒಂದು ದಿನ ಸಿಂಹ ಮತ್ತು ನರಿ ಬೇಟೆಯಾಡಲು ಒಟ್ಟಿಗೆ ಹೊರಟವು. ಆ ವಿಷಯದಲ್ಲಿ ನರಿ ಸಿಂಹದ ಮುಂದೆ ತನ್ನದೊಂದು ಸೂಚನೆಯನ್ನಿಟ್ಟಿತು. ಅದನ್ನು ಒಪ್ಪಿಕೊಂಡು ಸಿಂಹ ತನ್ನೊಡನೆ



ಮದುವೆಯ ಸಂಬಂಧವನ್ನು ಬೆಳೆಸಲು ಕತ್ತೆಯನ್ನು ತರುವಂತೆ ನರಿಯನ್ನು ಕಳುಹಿಸಿತು. 'ಮೃಗರಾಜನೊಡನೆ ಮದುವೆಯ ಸಂಬಂಧವೇ?' ಎಂದು ಕತ್ತೆ ಉಬ್ಬಿಹೋಗಿ ಸಿಂಹದ ಗುಹೆಯೊಳಗೆ ಹೋಯಿತು. ಕತ್ತೆ ಬರುತ್ತಲೇ ಸಿಂಹ ಅದರ ಮೇಲೆ ಬಿದ್ದು ಅದನ್ನು ಕೊಂದುಹಾಕಿತು. ಆ ಬಳಿಕ ನರಿಯನ್ನು ನೋಡಿ ಸಿಂಹ 'ನನ್ನ ಮಧ್ಯಾಹ್ನದ ಊಟ ಇಲ್ಲಿದೆ. ನಾನು ಒಂದು ನಿದ್ದೆ ತೆಗೆದು ಬರುವವರೆಗೆ ಇದನ್ನು ಕಾದುಕೊಂಡಿರು. ಇದನ್ನು ಮುಟ್ಟಿದರೆ ನಿನ್ನ ಗತಿ ಮುಗಿಯಿತು.' ಎಂದು ಹೇಳಿ ಹೊರಟುಹೋಯಿತು. ಇತ್ತ ನರಿ

ತನ್ನ ಒಡೆಯನಿಗಾಗಿ ಕಾದು ಕಾದು ಸಾಕಾಯಿತು. ಹಸಿವನ್ನು ತಡೆಯಲಾರದೆ ಕತ್ತೆಯ ಮೆದುಳನ್ನು ನರಿ ತಿಂದುಹಾಕಿತು. ಸಿಂಹ ಹಿಂತಿರುಗಿ ಬಂದಾಗ ಕತ್ತೆಯ ಮೆದುಳು ಅಲ್ಲಿರಲಿಲ್ಲ. ಕೋಪದಿಂದ ನರಿಯ ಕಡೆಗೆ ಸಿಂಹ ತಿರುಗಿ 'ಕತ್ತೆಯ ಮೆದುಳೆಲ್ಲಿ?' ಎಂದು ಗರ್ಜಿಸಿತು.

ನರಿ ಸಮಾಧಾನವಾಗಿ 'ಮೆದುಳೇ, ಮಹಾಸ್ವಾಮಿ! ಕತ್ತೆಗೆ ಮೆದುಳೆಲ್ಲಿ ಬಂತು? ಅದಕ್ಕೆ ಮೆದುಳಿದ್ದಿದ್ದರೆ ತಮ್ಮ ಬಳಿಗೆ ಬರುತ್ತಲೇ ಇರಲಿಲ್ಲ' ಎಂದು ಉತ್ತರಕೊಟ್ಟಿತು.

ಬಾಯಿದ್ದವರು ಬರದಲ್ಲಿಯೂ ಬದುಕಿದರು

೭. ಮುದಿ ಸಿಂಹ

ಒಂದಾನೊಂದು ಕಾಡಿನಲ್ಲಿ ಒಂದು ಸಿಂಹವಿತ್ತು. ಬೇಟೆಯಾಡುವುದೆಂದರೆ ಅದಕ್ಕೆ ತುಂಬ ಆಸೆ. ದೇಹದಲ್ಲಿ ಬಲವಿದ್ದಾಗ ರಾತ್ರಿಯೆನ್ನದೆ ಹಗಲೆನ್ನದೆ ಕಾಡಿನಲ್ಲಿ ಅಲೆದು ಪ್ರಾಣಿಗಳನ್ನು ಕೊಂದು ತಿಂದು ಸಿಂಹ ಸುಖವಾಗಿತ್ತು.

ಕಾಲಕ್ರಮದಲ್ಲಿ ಮೃಗಗಳ ರಾಜ ಮುದಿಯಾಯಿತು. ಅದರ ಕಾಲುಗಳು ಅದುರತೊಡಗಿದುವು. ಮೃಗಗಳನ್ನು ಅಟ್ಟಿಸಿಕೊಂಡು ಹೋಗಲು ಅದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಸಿಂಹಕ್ಕೆ ಬುದ್ಧಿ ಇದ್ದ ಕಾರಣ ತನ್ನ ಆಹಾರಕ್ಕೆ ಒಂದು ಉಪಾಯವನ್ನು ಹುಡುಕಿತು.

ತಾನು ಇದ್ದ ಕಾಡಿನ ಹತ್ತಿರವಿದ್ದ ಒಂದು ಗುಹೆಗೆ ಸಿಂಹ ಹೋಯಿತು. 'ನನಗೆ ದೇಹದಲ್ಲಿ ಸರಿಯಿಲ್ಲ. ಒಬ್ಬಂಟಿಗನಾಗಿದ್ದೇನೆ. ನನ್ನ ಸ್ನೇಹಿತರು ಬಂದು ಮಾತನಾಡಿದರೆ ನನಗೆ ಎಷ್ಟೋ ತೃಪ್ತಿ, ಸಮಾಧಾನ' ಎಂದು ಹೇಳತೊಡಗಿತು.



ಇತರ ಪ್ರಾಣಿಗಳು ಸಿಂಹದ ಮಾತನ್ನು ನಿಜವೆಂದೇ ನಂಬಿದುವು. ತಮ್ಮ ರಾಜನ ಕ್ಷೇಮವನ್ನು ವಿಚಾರಿಸಲು ಎಷ್ಟೋ ಪ್ರಾಣಿಗಳು ಗುಹೆಯ ಬಳಿಗೆ ಬಂದುವು. ಸಿಂಹವು ಅವುಗಳನ್ನು ಒಳಕ್ಕೆ ಬರುವಂತೆ ಬೇಡಿಕೊಳ್ಳುತ್ತಿತ್ತು. ಹಾಗೆ ಬಂದ ಪ್ರಾಣಿಗಳನ್ನು ಅದು ಹಿಡಿದು ತಿನ್ನುತ್ತಿತ್ತು.

ಒಂದು ದಿನ ನರಿಯೊಂದು ಗುಹೆಯ ಬಳಿಗೆ ಬಂತು. ನರಿಗೆ ಸಿಂಹದಷ್ಟೇ ಬುದ್ಧಿ. ಅದು ಗುಹೆಯೊಳಕ್ಕೆ ಹೋಗದೆ ಹೊರ

ಗಡೆಯೇ ನಿಂತು ' ಸ್ವಾಮಿ, ಈಗ ತಾವು ಹೇಗಿದ್ದೀರಿ?' ಎಂದು ಕೇಳಿತು.

ಸಿಂಹ ಉತ್ತರ ಕೊಟ್ಟಿತು: 'ಬಹಳ ಕಾಯಿಲೆ, ನೀನೇಕೆ ಹೊರಗೆ ನಿಂತಿರುವೆ?'

ಸಿಂಹದ ಮಾತಿಗೆ ನರಿ, ' ಒಳ್ಳೆಯದು; ನಾನು ಒಳಗೆ ಬರಲಾರೆ. ನಿಮ್ಮ ಬಳಿಗೆ ಬಂದವರ ಹೆಜ್ಜೆಯ ಗುರುತುಗಳಿವೆ. ಆದರೆ ಅವರು ಹೊರಗೆ ಬಂದ ಗುರುತುಗಳಿಲ್ಲ. ನನಗೂ ಅವರ ಗತಿಯಾಗಬಹುದು. ನಿಮಗೆ ನಮಸ್ಕಾರ.' ಎಂದು ಹೇಳುತ್ತ ಹೊರಟು ಹೋಯಿತು.

ದುಷ್ಟರನ್ನು ಕಂಡರೆ ದೂರ ಇರು.

೮. ಕೊಳದ ಜಿಂಕೆ

ಬಹುಕಾಲದ ಹಿಂದೆ ಒಂದು ಜಿಂಕೆ ಇತ್ತು. ಅದು ನೋಡಲು ಬಹು ಸುಂದರವಾಗಿತ್ತು. ಅದರ ಕೊಂಕು ಕೊಂಬು, ಹಾಗೂ ಉದ್ದವಾದ ತೆಳ್ಳನೆಯ ಕಾಲು ಜನರ ಮನಸ್ಸನ್ನು ಸೆಳೆಯುತ್ತಿದ್ದವು.

ಒಂದು ದಿನ ಜಿಂಕೆ ನೀರು ಕುಡಿಯಲು ಕೊಳದ ಬಳಿಗೆ ಹೋಯಿತು. ಕೊಳದ ನೀರು ಪಟಿಕದಂತೆ ತಿಳಿಯಾಗಿತ್ತು. ನೀರಿನಲ್ಲಿ ಜಿಂಕೆಯ ದೇಹವು ಪ್ರತಿಬಿಂಬಿಸಿತು.

ಸುಂದರವಾಗಿ ಹರಡಿದ್ದ ತನ್ನ ಕೊಂಬುಗಳನ್ನು ನೋಡಿದೊಡನೆಯೇ ಜಿಂಕೆಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಹಾಗೆಯೇ ತನ್ನ ಕಾಲುಗಳನ್ನು ಕಂಡು ಅದಕ್ಕೆ ಅಸಮಾಧಾನವಾಯಿತು. ತೆಳ್ಳಗಿರುವ ಕಾಲುಗಳಲ್ಲಿ ಶಕ್ತಿಯಿಲ್ಲವೆಂದು ಅದಕ್ಕೆ ತಿಳಿಯಿತು.



ಜಿಂಕೆ ತನ್ನಲ್ಲಿಯೇ, ‘ನನ್ನ ಕಾಲುಗಳು ಸ್ವಲ್ಪ ಮೊಟಕಾಗಿ ದಪ್ಪನಾಗಿದ್ದಿದ್ದರೆ ಎಷ್ಟು ಚೆನ್ನಿರುತ್ತಿತ್ತು!’ ಎಂದು ಯೋಚಿಸಿತು. ಹೀಗೆಯೇ ನೋಡುತ್ತ ಮುಂದೆ ಬರುವ ತೊಂದರೆಗಳನ್ನು ನೆನೆಯದೆ ಅಲ್ಲಿಯೇ ನಿಂತುಬಿಟ್ಟಿತು.

ಒಂದು ಸಿಂಹ ಮೆಲ್ಲಗೆ ಹಿಂದಿನಿಂದ ಬಂದು ಜಿಂಕೆಯ ಮೇಲೆ ನೆಗೆಯಿತು. ಅದರ ಹಿಡಿತದಿಂದ ತಪ್ಪಿಸಿಕೊಂಡು ಜಿಂಕೆ ಓಡ ತೊಡಗಿತು. ಜಿಂಕೆ ಮುಂದೆ, ಸಿಂಹ ಹಿಂದೆ! ಹೀಗೆ ಎಷ್ಟೋ ಮೈಲಿ ಜಿಂಕೆ ಮೈದಾನದಲ್ಲಿ ಓಡಿತು.

ಕೊನೆಗೆ ಎರಡೂ ಒಂದು ಕಾಡಿಗೆ ಬಂದುವು. ಕಾಡಿನಲ್ಲಿ ಜಿಂಕೆ ವೇಗವಾಗಿ ಓಡಲಾರದಾಯಿತು. ಅದರ ಕೊಂಬುಗಳು ಗಿಡ

ಗಳಿಗೆ ತಗಲಿ ಅದರ ಓಟವನ್ನು ತಗ್ಗಿಸುತ್ತಿದ್ದವು. ಕೊಂಬಿಲ್ಲದ ಕುಳ್ಳುಕಾಲಿನ ಸಿಂಹ ಮೊದಲಿನಂತೆಯೇ ಓಡುತ್ತಿತ್ತು.

ಕೊನೆಗೆ ಜಿಂಕೆಯ ಕೊಂಬು ಒಂದು ಮರದ ಕೊಂಬೆಯಲ್ಲಿ ಭದ್ರವಾಗಿ ಸಿಕ್ಕಿಕೊಂಡಿತು. ಏನು ಮಾಡಿದರೂ ಅದು ಹೊರಗೆ ಬರಲೊಲ್ಲದು. ಆವೇಳೆಗೆ ಸಿಂಹ ಅದನ್ನು ಬಲವಾಗಿ ಹಿಡಿದುಬಿಟ್ಟಿತು.


ಜಿಂಕೆ 'ಅಯ್ಯೋ! ನನ್ನ ಕಾಲುಗಳನ್ನು ನಿಂದಿಸಿ ಕೊಂಬು ಗಳಿಗೆ ಮರುಳಾದೆ. ನಾನು ಬದುಕಿದ್ದು ಕಾಲುಗಳಿಂದ. ನಾನು ಮರುಳಾದ ಕೊಂಬುಗಳೇ ನನ್ನ ಪ್ರಾಣ ತೆಗೆದುವು' ಎಂದು ಹೇಳುತ್ತ ಪ್ರಾಣಬಿಟ್ಟಿತು.

ಚೆಲುವಿಗಿಂತ ಉಪಯೋಗ ಮುಖ್ಯ

೯. ರಾಣಿ ಜೇನು

ಬಹುಕಾಲದ ಹಿಂದೆ ಇಬ್ಬರು ಅರಸು ಮಕ್ಕಳು ಸಾಹಸ ಕಾರ್ಯಗಳನ್ನು ಮಾಡಲು ಬಯಸಿ ಅರಮನೆಯನ್ನು ಬಿಟ್ಟು ಹೊರಟು ಹೋದರು. ಆದರೆ ಬಹುಕಾಲವಾದರೂ ಅವರು ಮನೆಗೆ ಹಿಂದಿರುಗಿ ಬರಲಿಲ್ಲ.

ಅಣ್ಣ ತಮ್ಮಂದಿರು ಬಹಳ ಕಾಲವಾದರೂ ಅವರ ಮನೆಗೆ ಬರದಿರಲು ಇವರ ಕಿರಿಯ ತಮ್ಮ ಬಲಭೀಮ ಅವರನ್ನು ಹುಡುಕಲು ಹೊರಟನು. ಬಲಭೀಮನು ಅಣ್ಣಂದಿರನ್ನು ಕಂಡಾಗ ಅವರು ತಮ್ಮನನ್ನು ನೋಡಿ ಹಾಸ್ಯಮಾಡಿದರು. ದಾರಿಯಲ್ಲಿ ಇರು ವೆಯ ಹುತ್ತವೊಂದು ಅವರ ಕಣ್ಣಿಗೆ ಬಿತ್ತು. ಹೆದರಿಕೆಯಿಂದ ಇರುವೆಗಳು ತತ್ತಿಗಳನ್ನು ಕಚ್ಚಿಕೊಂಡು ಓಡಾಡುವುದನ್ನು ನೋಡ ಬಯಸಿ, ಆ ಇಬ್ಬರು ಅಣ್ಣಂದಿರು ಹುತ್ತವನ್ನು ಬಡಮೇಲು



ಮಾಡುವುದರಲ್ಲಿದ್ದರು. ಆದರೆ ಬಲಭೀಮನು 'ಪಾಪ! ಈ ಸಣ್ಣ ಪ್ರಾಣಿಗಳಿಂದ ನಮಗೇನಾದರೂ ಕೇಡಾಯಿತೇ? ಅವು ಹುತ್ತದಲ್ಲಿ ಸುಖವಾಗಿರಲಿ. ನೀವು ಮಾಡುವ ಕೆಲಸವನ್ನು ನಾನು ಸುಮ್ಮನೆ ನೋಡಿ ಇರಲಾರೆ' ಎಂದನು. ತಮ್ಮನ ಮಾತನ್ನು ಕೇಳಿ ಸುಮ್ಮನಾದ ಅಣ್ಣಂದಿರು ಇನ್ನೂ ಸ್ವಲ್ಪ ದೂರ ಮುಂದೆ ನಡೆದರು. ದಾರಿಯಲ್ಲಿ ಅವರಿಗೆ ಒಂದು ಕೊಳ ಸಿಕ್ಕಿತು. ಅದರಲ್ಲಿ ಲೆಕ್ಕವಿಲ್ಲದಷ್ಟು ಬಾತುಗಳು ಈಜಾಡುತ್ತಿದ್ದುವು. ಅವುಗಳಲ್ಲಿ ಎರಡು ಬಾತುಗಳನ್ನು ಹಿಡಿದು ಬೇಯಿಸಿ ತಿನ್ನಬೇಕೆಂಬ ಆಸೆ ಅಣ್ಣಂದಿರಿಗೆ ಉಂಟಾಯಿತು. ಬಲಭೀಮನು ಇದಕ್ಕೆ ಅವಕಾಶ ಕೊಡದೆ 'ಬಾತುಗಳು ನಲಿದಾಡಲಿ. ಅವುಗಳಿಂದ ನಮಗಾದ ತೊಂದರೆ ಏನು? ನೀವು ಅವುಗಳನ್ನು ಕೊಲ್ಲುವುದನ್ನು ನಾನು ನೋಡಲಾರೆ.' ಎಂದನು. ಅಣ್ಣಂದಿರು ಬಾಯಿ ಮುಚ್ಚಿಕೊಂಡಿರಬೇಕಾಯಿತು.

ಇದಾದ ಮೇಲೆ ಈ ಮೂವರೂ ಪ್ರಯಾಣ ಮಾಡುತ್ತಾ ಜೇನುಗೂಡೊಂದರ ಬಳಿ ಬಂದರು. ಆ ಗೂಡಿನ ಬಾಯಿಂದ ಜೇನು ತುಪ್ಪ ವಿಶೇಷವಾಗಿ ಹರಿದು ಬರುತ್ತಿತ್ತು. ಗೂಡಿನ ಕೆಳಗೆ ಹೊಗೆ ಹಾಕಿ ಜೇನೆಬ್ಬಿಸಿ ತುಪ್ಪವನ್ನು ಕುಡಿಯಬೇಕೆಂದು ಅಣ್ಣಂದಿರು ಬಯಸಿದರು. ಇದಕ್ಕೆ ತಮ್ಮನು ಅವಕಾಶಕೊಡದೆ ಅವರನ್ನು ತಡೆದು ‘ಜೇನಿನ ತಂಟೆಗೆ ಹೋಗಬೇಡಿ. ಅವು ತಮ್ಮಿಷ್ಟಕ್ಕೆ ತಾವು ಇರಲಿ’ ಎಂದನು. ಅಣ್ಣಂದಿರು ಸುಮ್ಮನಿರಬೇಕಾಯಿತು.

ಆ ಸ್ಥಳದಿಂದ ಹೊರಟು ಅಣ್ಣ ತಮ್ಮಂದಿರು ಪ್ರಯಾಣ ಮಾಡುತ್ತಾ ಕೋಟೆಯೊಂದರ ಬಳಿಗೆ ಬಂದರು. ಆ ಕೋಟೆಯೊಳಗಿದ್ದ ಲಾಯದಲ್ಲಿ ಅನೇಕ ಕಲ್ಲಿನ ಕುದುರೆಗಳಿದ್ದುವು. ಮನುಷ್ಯರ ಸುಳಿವೇ ಅಲ್ಲಿರಲಿಲ್ಲ. ಆ ಮೂವರೂ ಕೋಟೆಯಲ್ಲಿದ್ದ ಕೋಣೆಯಿಂದ ಕೋಣೆಗೆ ನಡೆದು, ಕೊನೆಗೆ ಕೋಟೆಯ ಕೊನೆಯಲ್ಲಿದ್ದ ಬಾಗಿಲಿನ ಬಳಿಗೆ ಬಂದರು. ಆ ಬಾಗಿಲಿಗೆ ಮೂರು ಬೀಗಗಳನ್ನು ನೇತುಹಾಕಲಾಗಿತ್ತು. ಬಾಗಿಲ ನಡುವಿದ್ದ ಕಿಂಡಿಯ ಮೂಲಕ ಕೋಣೆಯನ್ನೆಲ್ಲ ನೋಡಬಹುದಾಗಿತ್ತು.

ಅಣ್ಣ ತಮ್ಮಂದಿರು ಆ ಕಿಂಡಿಯ ಮೂಲಕ ನೋಡಲು, ಕೋಣೆಯ ನಡುವೆ ಒಬ್ಬ ಭಯಂಕರನಾದ ಮನುಷ್ಯನು ಮೇಜೊಂದರ ಮುಂದೆ ಕುಳಿತಿರುವುದು ಕಂಡುಬಂತು. ಇವರು ಅವನನ್ನು ಒಂದು ಬಾರಿ, ಎರಡು ಬಾರಿ ಕೂಗಿದರು. ಆದರೆ ಇವರ ಮಾತನ್ನು ಅವನು ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. ಆದರೆ ಮೂರನೆ ಬಾರಿ ಇವನನ್ನು ಕೂಗಿದಾಗ, ಅವನು ಎದ್ದು ಬಾಗಿಲನ್ನು ತೆಗೆದು ಹೊರಕ್ಕೆ ಬಂದನು. ಇವರೊಂದಿಗೆ ಒಂದು ಮಾತನ್ನೂ ಅವನಾಡಲಿಲ್ಲ. ಆದರೆ ಆ ಮೂವರನ್ನೂ ತಿಂಡಿ ತಿನಸುಗಳಿಂದ ತುಂಬಿದ

ಮೇಜೊಂದರ ಬಳಿಗೆ ಕರೆದುಕೊಂಡು ಹೋದನು. ಅವರು ಚೆನ್ನಾಗಿ ತಿಂದು ಕುಡಿದ ಮೇಲೆ, ಆ ಮನುಷ್ಯನು ಇವರನ್ನು ಒಂದು ಮಲಗುವ ಮನೆಗೆ ಕರೆದುಕೊಂಡು ಹೋದನು. ಮರುದಿನ ಬೆಳಗಾಗುತ್ತಲೇ ಆ ಮನುಷ್ಯನು ಹಿರಿಯುವನನ್ನು ತನ್ನೊಡನೆ ಬರುವಂತೆ ಹೇಳಿ ಕಲ್ಲು ಮೇಜಿನ ಬಳಿಗೆ ಅವನನ್ನು ಕರೆದುಕೊಂಡು ಹೋದನು. ಆ ಮೇಜಿನ ಮೇಲೆ ಮೂರು ವಾಕ್ಯಗಳಿದ್ದವು: 'ಕಾಡಿನಲ್ಲಿರುವ ಜೌಗು ಪ್ರದೇಶದಲ್ಲಿ ಅರಸನ ಮಗಳ ಸಾವಿರ ಮುತ್ತುಗಳಿವೆ. ಅವುಗಳನ್ನು ಸಂಜೆಯೊಳಗಾಗಿ ಹುಡುಕಬೇಕು. ಸೂರ್ಯ ಮುಳುಗುವುದರೊಳಗೆ ಸಾವಿರಕ್ಕೆ ಒಂದು ಮುತ್ತು ಕಡಮೆಯಾದರೂ, ಮುತ್ತುಗಳನ್ನು ಹುಡುಕಲು ತೊಡಗಿದವರು ಕಲ್ಲುಕುದುರೆಯಾಗುವರು.' ಹೀಗೆಂಬುದೇ ಮೊದಲನೆಯ ವಾಕ್ಯವಾಗಿತ್ತು.

ಹಿರಿಯುವನು ದಿನವೆಲ್ಲಾ ಹುಡುಕಿದರೂ ನೂರು ಮುತ್ತುಗಳು ಮಾತ್ರ ಸಿಕ್ಕಿದ ಕಾರಣ ಅವನು ಕಲ್ಲು ಕುದುರೆಯಾದನು. ಎರಡನೆಯ ದಿನ ಉತ್ಸಾಹದಿಂದ ಈ ಕಾರ್ಯಕ್ಕೆ ತೊಡಗಿದ ಎರಡನೆಯವನಿಗೆ ದೊರಕಿದ್ದುದು ಇನ್ನೂರು ಮುತ್ತುಗಳು ಮಾತ್ರ. ಆದ್ದರಿಂದ ಅವನಿಗೂ ಇದೇ ಗತಿಯಾಯಿತು. ಬಲಭೀಮನ ಸರದಿ ಬರಲು ಅವನೂ ಆ ಜೌಗು ಪ್ರದೇಶವನ್ನು ಹುಡುಕಲು ತೊಡಗಿದನು. ಆದರೆ ಮುತ್ತುಗಳು ಸಿಕ್ಕುವುದು ಕಷ್ಟವಾದ ಕಾರಣ ಕೆಲಸ ನಿಧಾನವಾಗಿ ಸಾಗಿತ್ತು.

ಬಲಭೀಮನು ಕೆಲಸ ಮುಗಿಯದುದಕ್ಕಾಗಿ ಕಲ್ಲ ಮೇಲೆ ಕುಳಿತು ಅಳತೊಡಗಿದನು. ಆಗ ಹಿಂದೆ ಇವನು ಜೀವವನ್ನು ಕಾಪಾಡಿದ ಇರುವೆಯ ರಾಜ ತನ್ನ ಐದು ಸಾವಿರ ಜೊತೆಗಾರರೊಡನೆ ಅಲ್ಲಿಗೆ ಬಂದು ಸೂರ್ಯ ಮುಳುಗುವುದರೊಳಗಾಗಿ ಸಾವಿರ

ಮುತ್ತುಗಳನ್ನೂ ಹುಡುಕಿ ಗುಡ್ಡೆಹಾಕಿದನು. ಈಗ ಒಂದು ಕೆಲಸವೇನೋ ಮುಗಿಯಿತು. ಆದರೆ ಎರಡನೆಯ ವಾಕ್ಯದಲ್ಲಿ ಬರೆದ ಕೆಲಸ ಇನ್ನೂ ಕಷ್ಟವಾಗಿತ್ತು. ಇವರು ದಾರಿಯಲ್ಲಿ ಹಾಯ್ದು ಹೋದ ಕೊಳದ ತಳದಲ್ಲಿದ್ದ ರಾಜಕುಮಾರಿಯ ಮಲಗುವ ಮನೆಯ ಬೀಗದ ಕೈಯನ್ನು ತರುವುದೇ ಆ ಕೆಲಸವಾಗಿತ್ತು.

ಆ ಕೊಳದ ಬಳಿಗೆ ಬಲಭೀಮನು ಬಂದಾಗ, ತಮ್ಮ ಜೀವವನ್ನು ಹಿಂದೆ ಇವನು ಕಾಪಾಡಿದ್ದನೆಂಬ ಕೃತಜ್ಞತೆಯಿಂದ ಅಲ್ಲಿದ್ದ ಬಾತುಗಳೆಲ್ಲ ಈಜಾಡುತ್ತ ಇವನ ಬಳಿಗೆ ಬಂದವು. ಇವನ ಕಷ್ಟವನ್ನು ಕೇಳಿ ತಕ್ಷಣವೇ ಕೆಳಕ್ಕೆ ಇಳಿದು ಬೀಗದ ಕೈಯನ್ನು ತಂದು ಕೊಟ್ಟವು. ಮೂರನೆಯ ವಾಕ್ಯದಲ್ಲಿ ಹೇಳಿದ್ದ ಕೆಲಸವೇ ಅತ್ಯಂತ ಕಷ್ಟತರವಾದ ಕೆಲಸವಾಗಿತ್ತು. ಮೂವರು ರಾಜಕುಮಾರಿಯರಲ್ಲಿ ಅತ್ಯಂತ ಸುಂದರಳೂ ಮತ್ತು ಚಿಕ್ಕವಳೂ ಆದವಳನ್ನು ಕಂಡು ಹಿಡಿಯುವುದೇ ಆ ಕೆಲಸವಾಗಿತ್ತು. ಆ ಮೂವರಲ್ಲಿ ಯಾವ ವ್ಯತ್ಯಾಸವೂ ಕಂಡುಬರುತ್ತಿರಲಿಲ್ಲ. ಆದರೆ ಮಲಗುವ ಮುನ್ನ ಆ ಮೂವರೂ ಬೇರೆ ಬೇರೆ ಸಿಹಿಯನ್ನು ತಿಂದು ಮಲಗಿದ್ದರು. ಹಿರಿಯವಳು ಸಕ್ಕರೆ, ಎರಡನೆಯವಳು ಷರಬತ್ತು, ಕಿರಿಯವಳು ಒಂದು ಚಮಚ ಜೇನುತುಪ್ಪ.


ಬೆಂಕಿಯಿಂದ ಬಲಭೀಮನು ಕಾಪಾಡಿದ ರಾಣಿ ಜೇನು ತಕ್ಷಣ ಅಲ್ಲಿಗೆ ಬಂದು ಆ ಮೂವರು ರಾಜಕುಮಾರಿಯರನ್ನು ಪರೀಕ್ಷಿಸಿ, ಜೇನು ಕುಡಿದು ಮಲಗಿದ್ದ ರಾಜಕುಮಾರಿಯ ತುಟಿಯ ಮೇಲೆ ಕುಳಿತುಕೊಂಡಿತು. ರಾಜಕುಮಾರನಿಗೆ ಸರಿಯಾದ ರಾಜಕುಮಾರಿ ಯಾರೆಂಬುದು ತಿಳಿದುಹೋಯಿತು. ಇದಾದ ಮೇಲೆ ಮಂತ್ರ ಮಾಯವಾಗಲು ಆ ಮೂವರು ರಾಜಕುಮಾರಿಯರೂ ನಿದ್ರೆಯಿಂದ

ಎದ್ದರು. ಕಲ್ಲು ಕುದುರೆಗಳಾಗಿದ್ದವೂ ಮನುಷ್ಯರ ರೂಪ ಪಡೆದರು. ಬಲಭೀಮನು ಸುಂದರಿಯಾದ ರಾಜಕುಮಾರಿಯನ್ನು ಮದುವೆಯಾಗಿ, ತಂದೆ ಸತ್ತಮೇಲೆ ರಾಜನಾದನು. ಅವನ ಅಣ್ಣಂದಿರು ಉಳಿದ ಇಬ್ಬರು ರಾಜಕುಮಾರಿಯರನ್ನು ಮದುವೆಯಾಗುವುದರಿಂದಲೇ ತೃಪ್ತರಾಗಬೇಕಾಯಿತು.

ಕೊಲ್ಲದುದೆ ಧರ್ಮ
ಕೊಟ್ಟು ನಾ ಕೆಟ್ಟೆನೆನಬೇಡ, ಶಿವನಲ್ಲಿ
ಅದು ಕಟ್ಟಿದ ಬುತ್ತಿಯಹುದು

೧೦. ತೋಳ ಮತ್ತು ಮನುಷ್ಯ

ಒಂದು ಕಾಡಿನಲ್ಲಿ ಒಂದು ತೋಳ ಮತ್ತು ಒಂದು ನರಿ ಒಟ್ಟಿಗೆ ವಾಸಮಾಡಿಕೊಂಡಿದ್ದವು. ಒಂದು ದಿನ ನರಿ ತೋಳರಾಯನನ್ನು ಕುರಿತು 'ತೋಳರಾಯ, ಮನುಷ್ಯನ ಶಕ್ತಿಯನ್ನು ಎಷ್ಟೆಂದು ಹೇಳಲಿ? ಪ್ರಾಣಿಗಳಲ್ಲೆಲ್ಲಾ ಅವನೇ ಅತ್ಯಂತ ಬಲಿಷ್ಠ. ಅವನನ್ನು ಎದುರಿಸಿ ಹೋರಾಡುವುದು ಅಸಾಧ್ಯ. ಆದ್ದರಿಂದಲೇ ಮನುಷ್ಯನ ವಿಷಯದಲ್ಲಿ [illegible] ಯುಕ್ತಿಯನ್ನು ಹೂಡುವುದು. ಹಾಗೆ ಮಾಡದಿದ್ದರೆ ವಿಧಿಯಿಲ್ಲ' ಎಂದಿತು. ನರಿಯ ಮಾತಿಗೆ ತೋಳ ಹೇಳಿತು: 'ನನಗೇನಾದರೂ ಒಬ್ಬ ಮನುಷ್ಯ ಎದುರಿಗೆ ಸಿಕ್ಕಿದರೆ ಸಿಗಿದು ಹಾಕಿಬಿಡುತ್ತೇನೆ.' 'ಸರಿ, ಹಾಗಾದರೆ ನಿನಗೆ ಅಷ್ಟು ಆಸೆ ಇದ್ದರೆ ಅದಕ್ಕೆ ಅನುಕೂಲ ಮಾಡುತ್ತೇನೆ. ನಾಳೆ ಬೆಳಿಗ್ಗೆ ನನ್ನೊಡನೆ ಬಾ, ಮನುಷ್ಯನನ್ನು ತೋರಿಸುತ್ತೇನೆ.' ಎಂದಿತು ನರಿ. ತೋಳ ಸಂತೋಷದಿಂದ ಉಬ್ಬಿಹೋಯಿತು.



ಮೂರನೆಯ ದಿನ ಬೆಳಗ್ಗೆ ನರಿ ತೋಳನನ್ನು ಒಂದು ರಸ್ತೆಯ ಬಳಿ ಕರೆದುಕೊಂಡು ಹೋಯಿತು. ಬೇಟೆಗಾರರು ಪ್ರತಿದಿನವೂ ತಿರುಗಾಡುತ್ತಿದ್ದ ದಾರಿ ಅದು. ಆ ದಾರಿಯಲ್ಲಿ ಸೈನ್ಯದಿಂದ ಬಿಡುಗಡೆ ಹೊಂದಿದ ಒಬ್ಬ ಸಿಪಾಯಿ ಬಂದ.

‘ಅವನೊಬ್ಬ ಮನುಷ್ಯನೇನು?’ ಎಂದು ತೋಳ ಕೇಳಿತು.

‘ಅಲ್ಲ, ಹಿಂದೆ ಅವನೊಬ್ಬ ಮನುಷ್ಯನಾಗಿದ್ದ’ ಎಂದು ನರಿ ಉತ್ತರ ಕೊಟ್ಟಿತು.

ಆ ಬಳಿಕ ಶಾಲೆಗೆ ಹೋಗುತ್ತಿದ್ದ ಒಬ್ಬ ಹುಡುಗ ದಾರಿಯಲ್ಲಿ ಬಂದ.

‘ಅವನೊಬ್ಬ ಮನುಷ್ಯನೇನು?’ ಎಂದು ತೋಳ ಕೇಳಿತು.

‘ಅಲ್ಲ, ಮುಂದೆ ಮನುಷ್ಯನಾಗುತ್ತಾನೆ’ ಎಂದು ನರಿ ಉತ್ತರಕೊಟ್ಟಿತು.

ಸ್ವಲ್ಪ ಹೊತ್ತಿನ ಮೇಲೆ ಬೆನ್ನಿನ ಮೇಲೆ ಬಂದೂಕವನ್ನು ಧರಿಸಿದ, ಕೈಯಲ್ಲಿ ಮಚ್ಚನ್ನು ಹಿಡಿದ ಬೇಟೆಗಾರನೊಬ್ಬನು ದಾರಿಯಲ್ಲಿ ಬಂದನು. ಅವನು ಹತ್ತಿರಕ್ಕೆ ಬರುತ್ತಲೇ ನರಿ ತೋಳನನ್ನು ಕುರಿತು ಹೇಳಿತು: ‘ಇಗೋ ನೋಡು, ನೀನು ಹಾರಬೇಕಾಗಿರುವ ಮನುಷ್ಯ ಇಲ್ಲಿ ಬರುತ್ತಿದ್ದಾನೆ. ಸ್ವಲ್ಪ ತಾಳು. ನಾನು ಗುಹೆಯೊಳಗೆ ಅಡಗಿಕೊಳ್ಳುತ್ತೇನೆ.

ಬೇಟೆಗಾರನನ್ನು ನೋಡುತ್ತಲೇ ತೋಳ ಅವನ ಮೇಲೆ ನೆಗೆಯಿತು. ತೋಳವನ್ನು ನೋಡುತ್ತಲೇ ಅವನು ಅದರ ತಲೆಗೆ ನೇರವಾಗಿ ಗುರಿಯಿಟ್ಟು ಬಂದೂಕಿನಿಂದ ಹೊಡೆದನು. ತೋಳಕ್ಕೆ ಪೆಟ್ಟಾದರೂ ಮುಖವನ್ನು ಸಿಂಡರಿಸಿ ಧೈರ್ಯಮಾಡಿ ಮುಂದೆ ನುಗ್ಗಿತು. ಬೇಟೆಗಾರ ಬಂದೂಕಿನಿಂದ ಅದಕ್ಕೆ ಮತ್ತೊಂದು ಏಟು ಕೊಟ್ಟ. ತೋಳ ನೋವನ್ನು ಸಹಿಸಿಕೊಂಡು ಮುಂದೆ ನುಗ್ಗಿತು. ತನ್ನ ಮೇಲೆ ಬರುತ್ತಿದ್ದ ಆ ಪ್ರಾಣಿಗೆ ಹರಿತವಾದ ಮಚ್ಚಿನಿಂದ ನಾಲ್ಕು ಬಲವಾದ ಏಟುಕೊಟ್ಟ. ತೋಳ ರಕ್ತವನ್ನು ಕಾರುತ್ತ, ಅರಚುತ್ತ ನೆಲದ ಮೇಲೆ ಬಿದ್ದುಬಿಟ್ಟಿತು.

ತಕ್ಷಣವೆ ನರಿ ತನ್ನ ಗೆಳೆಯನ ಹತ್ತಿರ ಬಂದು ‘ತೋಳ

ರಾಯ, ಮನುಷ್ಯನ ಶಕ್ತಿಯ ರುಚಿಯನ್ನು ನೋಡಿದೆಯಾ?' ಎಂದು ಕೇಳಿತು.

ತೋಳ ಉತ್ತರ ಕೊಟ್ಟಿತು : 'ಅಯ್ಯಾ ನರಿ, ಮನುಷ್ಯನಲ್ಲಿ ಏನು ಮಹಾ ಶಕ್ತಿ ಇದೆ? ಬೇಟೆಗಾರ ತನ್ನ ಬೆನ್ನಮೇಲಿನ ಕೋಲನ್ನು ತೆಗೆದು ಊದಿ ಹೊಡೆದ. ನನ್ನ ಮುಖದ ಮೇಲೆ ಏನೋ ಸಿಡಿಯಿತು. ಆದರಿಂದ ಸ್ವಲ್ಪ ನೋವಾಯಿತು. ಆ ಮೇಲೆ ಮಳೆ ಮಿಂಚು ಬಂದಂತೆ ನನ್ನ ಮೇಲೆ ಏನೋ ಬಿತ್ತು. ಇನ್ನೂ ಹತ್ತಿರ ಹೋದಾಗ ಎಲುಬಿನಂತಹ ಪದಾರ್ಥದಿಂದ ನಾನು ಸತ್ತು ನೆಲಕ್ಕೆ ಬೀಳಬೇಕು, ಹಾಗೆ ಹೊಡೆದ.'

ನರಿ ತನ್ನ ಗೆಳೆಯನಿಗೆ 'ನೋಡಿದೆಯಾ ತೋಳರಾಯ, ನಿನ್ನದು ಬಂಡವಾಳವಿಲ್ಲದ ಬಡಾಯಿ. ಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂದು ಹೇಳುವ ಜನ ನೀವಲ್ಲವೆ?' ಎಂದು ನಗುತ್ತ ನುಡಿಯಿತು.
